ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು
ಸಿ.ಸಿ. **831/2020**

ಸಿ.ಡಬ್ಲ್ಯೂ -3, ಪಿ.ಡಬ್ಲ್ಯೂ -3

ದಿಃ **18.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಸ್ವಾಮಿನಾಯಕ |
| ತಂದೆ/ಗಂಡನ ಹೆಸರು | ಲೇಟ್ ಕಾಳನಾಯಕ |
| ವಯಸ್ಸು | 56 ವರ್ಷ |
| ಕೆಲಸ | ಸಬ್ ಇನ್ಸ್‌ಪೆಕ್ಟರ್ |
| ವಾಸಸ್ಥಳ | ಹೊಸರಾಮನಹಳ್ಳಿ ಗ್ರಾಮ |

ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ

ನಾನು **2018** ರಿಂದ **2021** ರವರೆಗೆ ಬಿಳಿಕೆರೆ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **08.08.2020** ರಂದು ಚಾಸಾ-**9** ರವರ ಮಾಹಿತಿ ಮೇರೆಗೆ **1.00** ಗಂಟೆ ಸಮಯದಲ್ಲಿ ಪ್ರಾಸಾ-**1** ಮತ್ತು **2** ರವರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಉಂಡವಾಡಿ ಗ್ರಾಮಕ್ಕೆ ಹೋಗಿ ಮಾರಮ್ಮನ ದೇವಸ್ಥಾನದ ಹತ್ತಿರ ಆರೋಪಿ ಸಾರ್ವಜನಿಕ ರಸ್ತೆಯಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದರೆಂದು ಬಂದ ಮಾಹಿತಿ ಮೇರೆಗೆ ನಾನು ಚಾಸಾ-**9** ರವರೊಂದಿಗೆ ನಾನು, ಚಾಸಾ-**4, 5** ರವರುಗಳು ಹೋಗಿ, ಆರೋಪಿಯನ್ನು ಹಿಡಿದು ಪರಿಶೀಲನೆ ಮಾಡಲಾಗಿ ಆತನ ಬಳಿ **38** ಪ್ಯಾಕೇಟುಗಳ ಓರಿಜಿನಲ್ ಚಾಯ್ಸ್ ಇದ್ದು, ಚಾಸಾ-**9** ರವರು ಸ್ಥಳದಲ್ಲಿ ಮಹಜರ್ ಮಾಡಿ ಠಾಣೆಗೆ ವಾಪಸ್ಸು ಬಂದಿರುತ್ತೇವೆ. ಸ್ಥಳದಿಂದ **38** ಪ್ಯಾಕೇಟುಗಳ ಓರಿಜಿನಲ್ ಚಾಯ್ಸ್ ನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **1**(ಸಿ) ಎಂದು ಗುರುತಿಸಲಾಯಿತು. ನಾನು ಈ ಬಗ್ಗೆ ಚಾಸಾ-**9** ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ **38** ಮಧ್ಯದ ಪ್ಯಾಕೇಟುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು.ಮಾ-**1** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲು ಆರೋಪಿತರ ಪರ ಶ್ರೀ **M.A** ವಕೀಲರಿಂದಃ

ಚಾಸಾ-9 ರವರಿಗೆ ಬಾತ್ಮಿ ಬಂದಿರುತ್ತದೆ. ಠಾಣೆಯನ್ನು ಬಿಡುವ ಸಮಯವನ್ನು ಚಾಸಾ-9 ರವರು ಠಾಣಾ ದಿನಚರಿಯಲ್ಲಿ ನಮೂದಿಸಿರಬಹುದು. ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ನಾವು ಸ್ಥಳಕ್ಕೆ ಹೋದಾಗ ಆರೋಪಿ ನಮ್ಮಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ. ನಾವು ಠಾಣೆಯಿಂದ ನೇರವಾಗಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಮು.ಮಾ-1 ಅಬಕಾರಿ ಇಲಾಖೆಗೆ ಸಂಬಂಧಿಸಿದ್ದಾ ಅಥವಾ ನಕಲಿ ಪ್ಯಾಕೇಟಾ ಎಂದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಅದು ಚಾಸಾ-9 ರವರಿಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಮು.ಮಾ-1 ರ ಬ್ಯಾಚ್ ನಂ., ಕ್ರ.ಸಂ. ಹಾಗೂ ಯಾವ ದಿನಾಂಕದಂದು ತಯಾರಾಗಿದೆ ಎಂದು ನಮೂದು ಆಗಿರುವುದಿಲ್ಲ. ನಮೂದು ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಚಾಸಾ-9 ರವರಿಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ.

ಘಟನಾ ಸ್ಥಳದಲ್ಲಿ ಖಾಲಿ ಪ್ಯಾಕೇಟುಗಳು ಇರಲಿಲ್ಲ. ಆರೋಪಿಯನ್ನು ವಶಕ್ಕೆ ಪಡೆಯುವ ಮುಂಚೆ ಆರೋಪಿಯ ಅಂಗಶೋಧನೆಯನ್ನು ಚಾಸಾ-9 ರವರು ಮಾಡಿರುತ್ತಾರೆ. ಆ ಸಮಯದಲ್ಲಿ ಹಣ ದೊರೆಯಿತಾ ಎಂದರೆ ಸಾಕ್ಷಿ ಚಾಸಾ-9 ರವರಿಗೆ ಗೊತ್ತು, ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-9 ರವರ ಮುಂದೆ ನೀಡಿದ ಹೇಳಿಕೆಯಲ್ಲಿ ನಮೂದಾಗಿರುವ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಆರೋಪಿಯನ್ನು ವಶಕ್ಕೆ ಪಡೆದ ನಂತರ ನ್ಯಾಯಾಂಗ ಬಂಧನಕ್ಕೆ ಬಂಧಿಸಿದ್ದೀರಾ ಎಂದರೆ ಸಾಕ್ಷಿ ಚಾಸಾ-9 ರವರಿಗೆ ಸಂಬಂಧಪಟ್ಟಿದ್ದು ಎಂದು ನುಡಿಯುತ್ತಾರೆ. ಆರೋಪಿಯಿಂದ ಯಾವುದೇ ಮು.ಮಾಲನ್ನು ವಶಪಡಿಸಿಕೊಂಡಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಯಾವುದೇ ಸ್ಥಳಕ್ಕೂ ಹೋಗಿರುವುದಿಲ್ಲ ಹಾಗೂ ಮಹಜರ್ ನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಇಲಾಖಾ ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ, ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು